**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ**

**ನ್ಯಾಯಾಲಯ, ಹುಣಸೂರು**

## ಸಿ.ಸಿ. ಸಂಖ್ಯೆ 611/2021

**ಫಿರ್ಯಾದಿದಾರರುಃ** ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ,

**ಆರೋಪಿ/ಗಳು ಃ**

ಎ 1. ಶಶಿ @ ಶಶಿಕುಮಾರ್
ಬಿನ್ ನಿಂಗರಾಜೇಗೌಡ @ ನಿಂಗರಾಜು ,
ವಯಸ್ಸು ಸುಮಾರು 28 ವರ್ಷಗಳು,
ವಾಸಃ ಹಳ್ಳದ ಮನುಗನಹಳ್ಳಿ ಗ್ರಾಮ,
ಹೆಚ್. ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

ಎ 2. ಸ್ವಾಮಿ @ ಸ್ವಾಮಿಗೌಡ
ಬಿನ್ ಲೇಟ್. ಶ್ರೀನಿವಾಸಗೌಡ,
ವಯಸ್ಸು ಸುಮಾರು 48 ವರ್ಷಗಳು,
ವಾಸಃ ಚಂದಗಾಲು ಗ್ರಾಮ,
ಕೆ.ಆರ್. ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

ಎ 3. ನಿಂಗರಾಜೇಗೌಡ @ ನಿಂಗರಾಜು
ಬಿನ್ ಲೇಟ್. ಬಸವೇಗೌಡ,

ಎ 4. ಪದ್ಮ @ ಪದ್ಮಮ್ಮ
ಕೋಂ ನಿಂಗರಾಜೇಗೌಡ @ ನಿಂಗರಾಜು
ವಯಸ್ಸು ಸುಮಾರು 48 ವರ್ಷಗಳು,
ಎ 3 ಮತ್ತು 4 ರವರ ವಾಸಃ ಹಳ್ಳದ ಮನುಗನಹಳ್ಳಿ ಗ್ರಾಮ,
ಹೆಚ್. ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

ಸಿಸಿ ಸಂಖ್ಯೆ : 611/2021

**<u>ದೋಷಾರೋಪಣೆ</u>**

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿಃ 02.02.2019 ರಂದು ಬೆಳಿಗ್ಗೆ 05.00 ಗಂಟೆ ಸಮಯದಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಉಯಿಗೊಂಡನಹಳ್ಳಿ ಗ್ರಾಮದ ಸರ್ವೆ ನಂ.38/87 ರ ಜಮೀನಲ್ಲಿರುವ ಬಸವೇಶ್ವರ ದೇವಸ್ಥಾನದಲ್ಲಿ 1 ನೇ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ ಇನ್ನೂ 14 ವರ್ಷ 10 ತಿಂಗಳು ಅಪ್ರಾಪ್ತ ವಯಸ್ಸಿನ ಸಾಕ್ಷಿ-2 ಕು. ಭಾರತಿ ರವರನ್ನು ಬಾಲ್ಯ ವಿವಾಹವಾಗಿರುತ್ತೀರೆಂದು, ಆ ಮೂಲಕ ಬಾಲ್ಯ ವಿವಾಹ ನಿಷೇದ ಕಾಯ್ದೆ ಕಲಂ 9 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಕೊನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಉದ್ದೇಶವುಳ್ಳವರಾಗಿ, ಬಾಲ್ಯ ವಿವಾಹ ನಿಷೇದ ಕಾಯ್ದೆ ಜಾರಿಯಲ್ಲಿರುವುದು ಗೊತ್ತಿದ್ದರೂ ಸಹ 1 ನೇ ಆರೋಪಿಯು 14 ವರ್ಷ 10 ತಿಂಗಳು ಅಪ್ರಾಪ್ತ ವಯಸ್ಸಿನ ಸಾಕ್ಷಿ-2 ಕು. ಭಾರತಿ ಇಚ್ಛೆಗೆ ವಿರದ್ಧವಾಗಿ ಸಾಕ್ಷಿ-2 ರವರಿಗೆ ತಾಳಿ ಕಟ್ಟುವುದರ ಮೂಲಕ ಬಾಲ್ಯ ವಿವಾಹವನ್ನು ನೆರವೇರಿಸಲು ಎಲ್ಲ ರೀತಿಯ ಸಹಕಾರ ಹಾಗೂ ಕುಮ್ಮಕ್ಕು ನೀಡಿರುತ್ತೀರೆಂದು, ಆ ಮೂಲಕ ಬಾಲ್ಯ ವಿವಾಹ ನಿಷೇದ ಕಾಯ್ದೆ ಕಲಂ 11 ರ ರೀತ್ಯಾ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ಮನು ಪಟೇಲ್ ಬಿ.ವೈ.)**
ದಿನಾಂಕಃ **04.07.2023**
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.